ಓ.ಎಸ್. ನಂ. 56/2014 ಡಿ.ಡಬ್ಲೂ-1 ಹೆಸರು - ದೇವಣ್ಣ

ಸಾಕ್ಷಿಯನ್ನು ದಿನಾಂಕಃ 22/07/2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಸಿ.ಎಲ್.ಬಿ. ವಕೀಲರಿಂದಃ-

ದಾವಾ ಆಸ್ತಿ ನನ್ನ ಜಮೀನಿನ ಪಶ್ಚಿಮಕ್ಕೆ ಇದೆ. ನನ್ನ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ವಾದಿಯು ದಾವಾ ಜಮೀನಿನಲ್ಲಿ ಸುಮಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಾರೆ. ದಾವಾ ಆಸ್ತಿಯು ವಾದಿಯ ಹೆಸರಿನಲ್ಲಿ ಮತ್ತು ನನ್ನ ಜಮೀನು ನನ್ನ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿ. ನನ್ನ ಜಮೀನನ್ನು ನಾನು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು ವಾದಿಯ ದಾವಾ ಜಮೀನುಗಳಲ್ಲಿ ಕಾಲುವೆಗೆ ಸರ್ಕಾರವು ವಶ ಪಡಿಸಿಕೊಂಡಿರುತ್ತದೆ. ಕಾಲುವೆಗೆ ಹೋಗಿರುವಂತಹ ಜಮೀನನ್ನು ಬಿಟ್ಟು ಉಳಿಕೆ ಜಮೀನಿನಲ್ಲಿ ವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ವ್ಯವಸಾಯ ಮಾಡಿಕೊಂಡು ಮತ್ತು ನಾನು ನನ್ನ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಇರುತ್ತೇನೆ. ನನ್ನ ಜಮೀನಿನ ದಕ್ಷಿಣಕ್ಕೆ ಚಾನಲ್ ಇರುತ್ತದೆ ಎಂದರೆ ಸರಿ. ಚಾನಲ್ ನ ದಕ್ಷಿಣಕ್ಕೆ ವಾದಿಯ ಅಣ್ಣ ಮತ್ತು ತಮ್ಮ ಪುಟ್ಟಬುದ್ದಿ ಮತ್ತು ಮಹದೇವಪ್ಪ ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ. ಸರ್ವೆ ನಂಬರ್ 2 ರಲ್ಲಿ ಚಾನಲ್ ಹೋಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 2/1 ರಲ್ಲಿ ಇರುವ 1 ಎಕರೆ 18 ಗುಂಟೆ ನನಗೆ ಸೇರಿದ್ದು ಎಂದರೆ ಸರಿ. ಸರ್ವೆ ನಂಬರ್ 2/2 ರಲ್ಲಿ ಇರುವ 1 ಎಕರೆ 20 ಗುಂಟೆ ವಾದಿಗೆ ಸೇರಿದ್ದು ಎಂದರೆ ಸರಿ. ಸರ್ವೆ ನಂಬರ್ 2 ರ ಪೋಡು ಆಗುವುದಕ್ಕೆ ಮುಂಚೆ ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 2 ರಲ್ಲಿ ಪೋಡು ಆಗುವುದಕ್ಕೆ ಮುಂಚೆ ಒಟ್ಟು 7 ಎಕರೆ 20 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಸಹಿ/-

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು